

# ಹಳತರ ಅಂಟು, ಹೊಸತನದ ನಂಟು...

ಶ್ರೀರಂಜನಿ ಅಡಿಗ

ಕಾರಿನಲ್ಲಿ ಹೋಗುವಾಗೆಲ್ಲ ಹಾಡುಗಳಿಗಾಗಿ ಜಗಳವಾಗುವುದುಂಟು. ಮಕ್ಕಳು ಇಂಗ್ಲಿಷ್, ಹಿಂದಿ ಹೊಸ ಸಿನಿಮಾಗಳ ಹಾಡು ಎಂದು ಹೇಳಿದರೆ, ಗಂಡನಿಂದ ಹಳೆಯ ಹಾಡುಗಳಿಗಾಗಿ ಡಿಮ್ಯಾಂಡ್. ‘ಹಳೆಯ ಹಾಡುಗಳು ಚೆನ್ನಾಗಿರುತ್ತವೆ! ಆ ಹಾಡಿನಲ್ಲಿರುವ ಸತ್ವ, ಅರ್ಥ ಈಗಿನ ಹಾಡುಗಳಲ್ಲಿ ಇವೆಯೇ? ಹಳೆಹಾಡುಗಳು ಎವರ್‌ಗ್ರೀನ್’ ಎಂದರೆ, ಮಕ್ಕಳಿಂದ, ‘ನೀವು ಏನೇ ಹೇಳಿ ಅಪ್ಪಾ, ಹಳೆ ಹಾಡುಗಳು ಬೋರು ಎಂಬ ಪ್ರತ್ಯುತ್ತರ.

‘ಹಾಗಾದರೆ ನನಗೆ ವಯಸ್ಸಾದ ಮೇಲೆ ನನ್ನನ್ನೂ ಬೋರು ಎನ್ನುವಿರಾ?’ ಭವಿಷ್ಯದ ಚಿಂತೆಯಲ್ಲಿ ಕೇಳುತ್ತಾರೆ. ಕೊನೆಗೆ ಯಾವ ಹಾಡುಗಳೂ ಪ್ಲೇ ಆಗದೆ ತಲುಪಬೇಕಾದ ಜಾಗ ಮುಟ್ಟಿರುತ್ತೇವೆ.

ನಾವು ಭಾರತೀಯರಿಗೆ ಹಳತೆಂದರೆ ಏನೋ ಮಮಕಾರ! ಕೆಲವರಿಗೆ ಹಳೆಸಾಮಾನುಗಳನ್ನು ಸಂಗ್ರಹಿಸುವುದು ಹವ್ಯಾಸ. ಹಳೆಕಾಲದ ಪಾತ್ರೆಪಗಡಿ, ನಾಣ್ಯಗಳು, ಕೆತ್ತನೆಗಳು, ತಾಳೆಗರಿ, ಗ್ರಾಮಾಫೋನು ಎಂದು ಪುಟ್ಟ ಮ್ಯೂಸಿಯಂ ಮಾಡಿರುತ್ತಾರೆ. ನನ್ನ ಅಜ್ಜನ ಮನೆಯಲ್ಲಿ ಸೊಗಸಾದ ಕೆತ್ತನೆಗಳುಳ್ಳ ಮರದ ತೊಟ್ಟಿಲಿತ್ತು. ಅಜ್ಜಿಗೆ ತವರುಮನೆಯ ಉಡುಗೊರೆ. ಬಲು ಗಟ್ಟಿಮುಟ್ಟು. ಈಗಿನ ನವನವೀನ ತೊಟ್ಟಿಲುಗಳಿರುವಾಗ ಹಾಗೂ ಸದ್ಯಕ್ಕೆ ಹುಟ್ಟುವ ಮಗು ಇಲ್ಲದೇ ಇರುವಾಗ ಅದನ್ನು ಇಟ್ಟುಕೊಳ್ಳಲು ಹೊರೆ ಆಗಿತ್ತು. ಯಾರಿಗಾದರೂ ಕೊಡಲು ಭಾವನಾತ್ಮಕ ಸೆರೆ. ಹೀಗಾಗಿ ನನ್ನ ಮಾವ ಅದರ ಮೇಲೆ ಚಂದದ ಗಾಜಿನ ಪಟ್ಟಿಯಿಟ್ಟು ಪಾಲಿಶ್ ಮಾಡಿಸಿ ಹಾಲಿನಲ್ಲಿ ಇಡಲು ಟೇಬಲ್ ಮಾಡಿಸಿದರು, ಈಗ ಬಂದವರಿಗೆಲ್ಲ ಅದರ ಮೇಲೆಯೇ ಕಣ್ಣು. ‘ಎಲ್ಲಿ ಕೊಂಡಿರಿ?’ ಎಂದು. ಹಳತನ್ನು ಹೊಸತನ್ನಾಗಿ ಮಾಡಿ ಮರುಬಳಕೆ ಮಾಡಿದ ಯೋಚನೆ ಸೂಪರ್‌ಹಿಟ್.

ಅಜ್ಜಿಯ ಹಳೆಯ ಪಿಸಲುಪಿಸಲಾದ ಸೀರೆಯನ್ನೂ ಬಿಡದ ಮೊಮ್ಮಕ್ಕಳು ಅದನ್ನು ಲೆಹಂಗಾ, ದಾವಣಿಯೆಂದು ಹೊಸ ಲುಕ್ಕಿನಲ್ಲಿ ಹೊಲಿಸಿಕೊಂಡು ‘ಇದೇ ಟ್ರೆಂಡ್’ ಎನ್ನುತ್ತಾ ಆಧುನಿಕ ವಸ್ತ್ರವಿನ್ಯಾಸದ ಓರಗೆಯ ಗೆಳತಿಯರ ಕಣ್ಣು ಕೆಂಪಾಗಿಸಿ ಸಂತಸಪಡುವರು. ಅದಕ್ಕೆ ಅಜ್ಜಿಯ ಕಾಸಿನಸರ, ಅವಲಕ್ಕಿ ಸರ ಧರಿಸಿ ತರುಣರಿಗೆ ಮನೆ ದಾರಿ ಮರೆಯುವಂತೆ ಮಾಡುತ್ತಾರೆ. ಭರ್ಜರಿ ಚಿನ್ನದ ಅಂಗಡಿಗಳಲ್ಲಿ ನವೀನ ಶೈಲಿಯ ಆಭರಣಗಳ ಜೊತೆ ‘ಆ್ಯಂಟಿಕ್ ಡಿಸೈನ್’ ಎಂದು ಪ್ರತ್ಯೇಕ ವಿಭಾಗವನ್ನೇ ತೆರೆದಿರುತ್ತಾರೆ.

ಹಳತಾದ ಸಾಮಾನುಗಳನ್ನು ಎಸೆಯುವುದೆಂದರೆ ಯಾವುದೋ ಅಂತಃಶಕ್ತಿ ನಮ್ಮನ್ನು ತಡೆಯುತ್ತಿರುತ್ತದೆ. ಅದು ಎಷ್ಟೇ ಹಳತಾಗಿ ಗುಜರಿಗೆ ಹಾಕಲು ಯೋಗ್ಯತೆ ಪಡೆದಿದ್ದರೂ ಎಸೆಯುವುದಿಲ್ಲ. ಅಂಥವನ್ನು ಮುಂದೆ ಯಾವತ್ತಾದರೂ ಉಪಯೋಗಕ್ಕೆ ಬರಬಹುದು ಎಂದು ಸ್ಟೋರ್‌ರೂಂ ಮಾಡಿರುತ್ತೇವೆ.

ಹಳತಾದ ಬೆಡ್‌ಶೀಟುಗಳನ್ನೂ ಸುಲಭದಲ್ಲಿ ಎಸೆಯಲಾರೆವು, ಡಬಲ್ ಇದ್ದುದನ್ನು ಸಿಂಗಲ್ ಮಾಡಿ; ಸಿಂಗಲನ್ನು ದಿಂಬಿನ ಕವರು ಮಾಡಿ; ಚೆನ್ನಾಗಿದ್ದರೆ ಏಪ್ರನ್ನು ಮಾಡಿ; ಸಣ್ಣಸಣ್ಣ ತುಂಡುಗಳನ್ನು ಒರೆಸುವ ಬಟ್ಟೆ ಮಾಡಿ ಅದಕ್ಕೆ ಸುಲಭಕ್ಕೆ ಮುಕ್ತಿ ಕೊಡೆವು, ಅಜ್ಜಿಯ ಕಾಟನ್ ಸೀರೆಯೂ ಹಾಗೆಯೇ. ಮಗುವಿಗೆ ಕೌದಿ, ಉಬ್ಬೆಗೆ ಅಡಿ ಹಾಸಲು ಎಂದು, ತುಪ್ಪ ಸೋಸಲು ಬಳಸಿ ಕಟ್ಟಕಡೆಯ ತುಂಡನ್ನು ಸದುಪಯೋಗ ಮಾಡಿಕೊಂಡರೇನೇ ನೆಮ್ಮದಿ. ಬರಿ ಹೆಂಗಸರ ಬಟ್ಟೆಗಳಲ್ಲ, ಗಂಡಸರ ಶರಟನ್ನೂ ಏಪ್ರನ್ನು, ದಿಂಬಿನ ಕವರಿಗಾಗಿ ನವೀನ ಮಾದರಿಯಲ್ಲಿ ಕತ್ತರಿಸಿ ಹೊಲಿದು ನಮ್ಮೊಂದಿಗಿನ ಬಾಂಧವ್ಯ ಕಡಿಯಲು ಬಿಡುವುದಿಲ್ಲ. ಹಲ್ಲುಜ್ಜುವ ಬ್ರಶ್ಶುಗಳ ಹಲ್ಲುಗಳು ಅಗಲವಾಗಿ ಬೈತಲೆ ಬಿಟ್ಟ ಮೇಲೆ ಗೋಡೆಯ ಮೂಲೆ ತಿಕ್ಕುವ, ಮಿಕ್ಸಿ ಸಂದು ಉಜ್ಜುವ ಕೆಲಸಕ್ಕೆ ಹಚ್ಚುತ್ತೇವೆ. ನನಗಾಗದು ಎಂದು ಚೀರುತ್ತಿದ್ದರೂ ಅವುಗಳಿಂದಾಗುವ ಅಷ್ಟೂ ಕೆಲಸಗಳನ್ನು ಮಾಡಿಸಿದ ಮೇಲೆ ಪೈಸಾವಸೂಲ್ ಎಂದು ನಿಟ್ಟುಸಿರು ಬಿಡುವೆವು.

ಹಳೆಯ ಕಾರುಗಳು, ಲ್ಯಾಂಬ್ರೆಟ್ಟಾ ಸ್ಕೂಟರುಗಳು, ಸೈಕಲ್ಲುಗಳು ಈಗ ಮದುವೆಮನೆಗಳಲ್ಲಿ ಸೆಲ್ಫಿ ಪಾಯಿಂಟುಗಳಾಗಿ ಮಿಂಚುತ್ತಿವೆ. ವಿಂಟೇಜು ಕಾರುಗಳಲ್ಲಿ ಮದುಮಕ್ಕಳು ಸಭೆಗೆ ಬರುವುದು ಅದ್ದೂರಿತನ. ಗುಜರಿಗೆ ಸೇರಲು ಯೋಗ್ಯವಾದ ಆಟೊ, ಟೆಟೆಗಳು ಐಸಿಯು ಸೇರುವ ಬದಲು ಮೈತುಂಬಾ ದೀಪಗಳನ್ನು ಬೆಳಗಿಸಿಕೊಂಡು ಫುಡ್‌ಟ್ರಕ್‌ಗಳಾಗಿ ಬಡ್ತಿ ಪಡೆದಿವೆ. ಸ್ಟಾರು ಹೋಟೆಲುಗಳಿಗಿಂತ ವಹಿವಾಟಿನಲ್ಲಿ, ಪ್ರಸಿದ್ಧಿಯಲ್ಲಿ, ವ್ಲಾಗರುಗಳಿಗೆ ಮೆಚ್ಚಿನ ತಾಣವಾಗಿ ಬೇರೇಯೇ ಸ್ಟೇಟಸ್ಸಿನಲ್ಲಿವೆ. ಹಾಗೆ ರೈಲುಗಳ ಬೋಗಿ, ವಿಮಾನದ ಬಾಡಿಗಳೂ ರೆಸ್ಟೋರೆಂಟುಗಳಾಗಿ ಆಹಾರಕ್ಕಿಂತ ಅದೇ ಮುಖ್ಯ ಆಕರ್ಷಣೆಗಳಾಗಿವೆ.

ನಮ್ಮ ಈಗಿನ ಜೀವನಶೈಲಿ ಕೂಡ ಹಳೆ ಮಾದರಿಗೆ ಮನಸೋಲುತ್ತಿದೆ ಅನ್ನಿಸುತ್ತಿಲ್ಲವೇ? ನಮಗೀಗ ಹಟ್ಟಿಗೊಬ್ಬರ ಹಾಕಿ ಬೆಳೆಸಿದ ತರಕಾರಿ ಹಣ್ಣುಗಳೇ ಬೇಕು. ಕರಿಯಲು ಗಾಣದೆಣ್ಣೆಯಾಗಬೇಕು; ಟೂರು ಹೋಗಲು ವಿಲೇಜ್ ಥೀಂ ಇರುವ ಜಾಗ ಬೇಕು. ಹೀಗೆ ಹಳತಿಗೆ ಅಂಟಿಕೊಂಡರೂ, ನಮಗೆ ವಯಸ್ಸಾಗಿ ಹಳತಾಗುವುದನ್ನು ಒಪ್ಪಲು ತಯಾರಿಲ್ಲದಿರುವುದು ವಿಚಿತ್ರ. ತಲೆಗೂದಲು ನರೆಯಲಾರಂಭಿಸಿದ ಕೂಡಲೇ ಮನಸ್ಸು ಪ್ರತಿರೋಧ ಒಡ್ಡುವುದು. ನಾವಿನ್ನೂ ಹೊಸಬರಾಗಿಯೇ ಇದ್ದೇವೆ ಎಂದು ತೋರಿಸಲು ಡೊಂಬರಾಟ ಮಾಡುತ್ತೇವೆ.

ವಯಸ್ಸಾದವರು ಮನೆಯಲ್ಲಿದ್ದರೆ ಅವರ ಬೆಲೆ ನಮಗೆ ತಿಳಿಯದೇ ದಡ್ಡತನ ಮಾಡುತ್ತೇವೆ. ನಾವೂ ನಾಳೆ ಅವರ ಹಾದಿ ತುಳಿಯುವವರು ಎಂಬುದನ್ನು ಮರೆತು ಹಣ್ಣೆಲೆ ನೋಡಿ ಚಿಗುರೆಲೆ ನಕ್ಕಂತೆ ಉಡಾಫೆ ಮಾಡುತ್ತೇವೆ. ಗೋಪಾಲಕೃಷ್ಣ ಅಡಿಗರು ‘ಹೊಸತು ಹಳೆಯದರ ಜೊತೆಗೂ, ಹಳೆಯದು ಹೊಸದರ ಜೊತೆಗೂ ಹೊಂದಿಕೊಳ್ಳದೆ ಬದುಕು ಸುಸಂಕೃತವಾಗುವುದಿಲ್ಲ’ ಎಂದಿದ್ದಾರೆ. ಡಿವಿಜಿ ‘ನರನ ಪ್ರಾಕ್ತನಕೆ ನೂತನ ಸತ್ವಬೆರೆತ, ಪರಿವುದೀ ವಿಶ್ವಜೀವನಲಹರಿಯನವರತ’ ಎಂದು ಕಗ್ಗದಲ್ಲಿ ಹೇಳಿದ್ದಾರೆ. ಮನೆಯಲ್ಲೂ ಹಾಗೇ ಇರೋಣ ಅಲ್ಲವೇ?

ಪ್ರತಿಕ್ರಿಯಿಸಿ: feedback@sudha.co.in